# ‘ಸ್ಕ್ರೀನ್ ಇಮೇಜ್’ ಬಯಸದ ಸಂಯುಕ್ತಾ



‘ಇದು ನನಗೆ ಹೊಸ ಆರಂಭದಂತೆ ಅನಿಸುತ್ತಿದೆ. ಸಿನಿಮಾದಲ್ಲಿ ನನ್ನ ಕರಿಯರ್ ಪ್ರಾರಂಭವಾದಾಗಿನಿಂದ, ಪ್ರತಿ ವರ್ಷ ನನ್ನ ನಟನೆಯ ಎರಡು ಸಿನಿಮಾಗಳು ಬಿಡುಗಡೆಯಾಗುತ್ತಿದ್ದವು. ಆದರೆ 2023, ನನ್ನ ವೃತ್ತಿಬದುಕಿನ ಭಾಗವಾಗಿ ತುಂಬಾ ಚೆನ್ನಾಗಿದೆ ಎನಿಸುತ್ತಿದೆ. ಈ ವರ್ಷದಲ್ಲಿ ಕನ್ನಡ ಸೇರಿದಂತೆ ಬೇರೆ ಬೇರೆ ಭಾಷೆಯಲ್ಲಿ, ಒಂಬತ್ತು ಸಿನಿಮಾಗಳಿವೆ. ಇನ್ನಷ್ಟು ಸಿನಿಮಾಗಳು ಸರದಿಯಲ್ಲಿವೆ’ ಎಂದು ಸಂತಸ ಹಂಚಿಕೊಂಡಿದ್ದಾರೆ ನಟಿ ಸಂಯುಕ್ತಾ ಹೊರನಾಡು.

ಈಚೆಗೆ ತೆರೆಕಂಡ ‘ಟೋಬಿ’ ಸಿನಿಮಾದಲ್ಲಿ, ಸಾವಿತ್ರಿ ಪಾತ್ರ ನಿರ್ವಹಿಸಿರುವ ಅವರು, ತಮ್ಮ ಸಿನಿಮಾ ಬದುಕಿನ ಕುರಿತು ಮಾತನಾಡಿದ್ದಾರೆ.

‘ನಾನು ಸಿನಿಮಾರಂಗಕ್ಕೆ ಬಂದು ಹಲವು ವರ್ಷಗಳಾಗಿವೆ. ಈ ಅವಧಿಯಲ್ಲಿ ಯಾವುದೇ ನಿರ್ದಿಷ್ಟ ‘ಸ್ಕ್ರೀನ್ ಇಮೇಜ್’ಗೆ ಬೀಳಬಾರದೆಂದು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದೇನೆ. ಸಿನಿಮಾರಂಗದಲ್ಲಿ ದೀರ್ಘಾವಧಿಯವರೆಗೆ ಕಲಾವಿದೆಯಾಗಿ ಉಳಿದುಕೊಳ್ಳಲು ಮಾನಸಿಕವಾಗಿ ಬಹಳ ಗಟ್ಟಿಯಾಗಿರಬೇಕು ಹಾಗೂ ತಾಳ್ಮೆ ತುಂಬಾ ಮುಖ್ಯವಾಗಿರಬೇಕು’ ಎಂದಿದ್ದಾರೆ.

‘ಟೋಬಿ’ ಸಿನಿಮಾದಲ್ಲಿ ರಾಜ್ ಬಿ. ಶೆಟ್ಟಿ ಜೊತೆಗೆ ಸ್ಕ್ರೀನ್ ಹಂಚಿಕೊಂಡ ಅನುಭವವನ್ನೂ ಪ್ರಕಟಿಸಿರುವ ಅವರು, ‘ರಾಜ್ ಉತ್ತಮ ವ್ಯಕ್ತಿ. ಈ ಸಿನಿಮಾದಲ್ಲಿ ಅವರ ಪಾಸಿಟಿವಿಟಿಯೇ ನಮ್ಮನ್ನು ಪ್ರೇರೇಪಿಸಿದ್ದು’ ಎಂದಿದ್ದಾರೆ. ಸಿನಿಮಾದಲ್ಲಿ ತಮ್ಮ ಪಾತ್ರವನ್ನೂ ವಿಮರ್ಶಿಸಿ, ‘ಟೋಬಿ ಸಿನಿಮಾದಲ್ಲಿ ನನ್ನ ಪಾತ್ರ, ತನ್ನದೇ ರೀತಿ ರಿವಾಜು ಹೊಂದಿರುವ ದಿಟ್ಟ ಮಹಿಳೆಯದ್ದು. ಹೈಲೈಟ್ ಆಗುವಂಥ ಪಾತ್ರ. ಇದೇ ಪಾತ್ರವನ್ನು ಎರಡು ವರ್ಷಗಳ ಹಿಂದೆ ನನಗೆ ನೀಡಿದ್ದರೆ ಬಹುಶಃ ಚೆನ್ನಾಗಿ ಮಾಡಲು ಆಗುತ್ತಿರಲಿಲ್ಲವೇನೋ. ಆದರೆ ಇಷ್ಟು ವರ್ಷಗಳಲ್ಲಿ, ಜೀವನದ ಕುರಿತ ನನ್ನ ನೋಟ ತುಂಬಾ ಪರಿಣಾಮಕಾರಿಯಾಗಿ ಬದಲಾಗಿದೆ. ಹೀಗಾಗಿಯೇ, ಈ ಪಾತ್ರಕ್ಕೆ ನಾನು ನ್ಯಾಯ ಒದಗಿಸಿದ್ದೇನೆ ಅನ್ನಿಸುತ್ತಿದೆ’ ಎಂದು ಅವಲೋಕಿಸಿದ್ದಾರೆ.

ಈಚೆಗೆ ‘ಹೊಂದಿಸಿ ಬರೆಯಿರಿ’, ‘ಬಯಲುಸೀಮೆ’, ‘ಟೋಬಿ’ ಸಿನಿಮಾಗಳಲ್ಲಿ ನಟಿಸಿರುವ ಸಂಯುಕ್ತಾ ಅವರ ಕೈಯಲ್ಲಿ ಈ ವರ್ಷ ಕನ್ನಡ, ತಮಿಳು, ತೆಲುಗು ಸೇರಿ ಒಟ್ಟು 7 ಸಿನಿಮಾಗಳು, 2 ವೆಬ್ ಸೀರೀಸ್ ಇವೆ. ಕೆಲವು ಈಗಾಗಲೇ ಬಿಡುಗಡೆಗೊಂಡಿವೆ. ಇನ್ನು ಕೆಲವು ಬಿಡುಗಡೆಯಾಗಬೇಕಿವೆ. ಇವುಗಳ ಹೊರತಾಗಿ ಮತ್ತಷ್ಟು ಪ್ರಾಜೆಕ್ಟ್‌ಗಳು ಪೈಪ್‌ಲೈನ್‌ನಲ್ಲಿವೆ.

ಹೊಸ ಹೊಸ ಅವಕಾಶಗಳ ನಡುವೆಯಿರುವ ಸಂಯುಕ್ತಾ, ‘ಇದಕ್ಕಿಂತ ಉತ್ತಮವಾದದ್ದನ್ನು ನಾನೇನು ಬಯಸಲು ಸಾಧ್ಯ?’ ಎನ್ನುತ್ತಾ ಸಂತಸಗೊಂಡಿದ್ದಾರೆ.